ಕೆ. ಪಿ. ಎಸ್. ಸಿ. ಯಲ್ಲಿ ಅಂಕಗಳ ಮರು ಎಣಿಕೆಯಲ್ಲಿ ವಿಳಂಬ

೪೦೦ (೫೧೬) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಇಲಾಖಾಪರೀಕ್ಷೆಗಳಲ್ಲಿ ಅನುತ್ತೀರ್ಣರಾದಂತಹವರು ತಮ್ಮ ಅಂಕಗಳನ್ನು ತಿಳಿದುಕೊಳ್ಳಲು ಮತ್ತು ಮರು ಎಣಿಕೆ ಮಾಡಿಕೊಳ್ಳಲು ಕರ್ನಾಟಕ ಲೋಕ ಸೇವಾ ಆಯೋಗದ ನಿಯಮಾವಳಿಗಳಲ್ಲಿ ಅವಕಾಶ ಇದೆಯೇ ?

ಆ) ಹಾಗಿದ್ದಲ್ಲಿ ಆ ನಿಯಮ ಯಾವುದು, ಎಷ್ಟು ದಿನಗಳಲ್ಲಿ ಅರ್ಜಿ ಕೊಡಬೇಕು ಮತ್ತು ಎಷ್ಟು ಹಣ ಕಟ್ಟಬೇಕು ?

ಇ) ೧೯೮೮ರ ಮೊದಲನೇ ಅಧಿವೇಶನದ ಪರೀಕ್ಷೆಯ ಬಗ್ಗೆ ಮರು ಎಣಿಕೆಕೋರಿ ಎಷ್ಟು ಅರ್ಜಿಗಳು ಬಂದಿದ್ದವು ?

ಈ) ಎರಡನೇ ಅಧಿವೇಶನದ ಪರೀಕ್ಷೆಯು ೦೧-೦೧-೮೯ ರಂದು ನಡೆದರೂ ಮರು ಎಣಿಕೆಯ ಫಲಿತಾಂಶವನ್ನು ಕೊಟ್ಟಿಲ್ಲ ಎಂಬ ಬಗ್ಗೆ ಸರಕಾರವು ತನಿಖೆಯನ್ನು ಮಾಡಿಸಿ ನ್ಯಾಯ ದೊರಕಿಸುವುದೇ ?

ಉ) ಮೊದಲನೇ ಅಧಿವೇಶನಕ್ಕೆ ಸಂಬಂಧಪಟ್ಟಂತೆ ಬಂದ ಮರು ಎಣಿಕೆ ಅರ್ಜಿಗಳ ಪ್ರಕಾರ, ಮರು ಎಣಿಕೆಯನ್ನು ಮಾಡಿಸಿ, ಅಭ್ಯರ್ಥಿಗೆ ಎಂದು ತಿಳಿಸಲಾಯಿತು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಹೌದು, ಕರ್ನಾಟಕ ಲೋಕ ಸೇವಾ ಆಯೋಗ (ಸೇವಾ ಪರೀಕ್ಷೆಗಳನ್ನು ನಡೆಸುವಿಕೆ) ನಿಯಮಗಳು, ೧೯೮೫ರಲ್ಲಿ ಅವಕಾಶವಿದೆ.

ಆ) ಅಂಪಟ್ಟಿಗಾಗಿ; ನಿಯಮ ೧೫ರ ಪ್ರಕಾರ ರಾಜ್ಯಪತ್ರದಲ್ಲಿ ಫಲಿತಾಂಶ ಪ್ರಕಟವಾದ ಒಂದು ತಿಂಗಳ ಒಳಗಾಗಿ ಶುಲ್ಕ ರೂ. ೨-೦೦ ನ್ನು ಕಟ್ಟಿ ಅಂಕ ಪಟ್ಟಿ ಪಡೆಯಬಹುದು. ಮರು ಎಣಿಕೆಗಾಗಿ ನಿಯಮ ೧೨ರ ಪ್ರಕಾರ, ಅಭ್ಯರ್ಥಿಗಳು ರಾಜ್ಯಪತ್ರದಲ್ಲಿ ಫಲಿತಾಂಶ ಪ್ರಕಟವಾದ ೬೦ ದಿನಗಳ ಒಳಗಾಗಿ ಅಂಕಗಳ ಮರು ಎಣಿಕೆಗಾಗಿ ರೂ. ೧೦-೦೦ ನ್ನು ಶುಲ್ಕವಾಗಿ ಕಟ್ಟಿ ಅರ್ಜಿ ಸಲ್ಲಿಸಬಹುದು.

ಇ) ೧೮೪.

ಈ) ೧೯೮೮ರ ಮೊದಲನೆಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ ; ೨೯-೧೦-೮೮ರಂದು ಪ್ರಕಟವಾಯಿತು. ಅಭ್ಯರ್ಥಿಗಳು ಮರು ಎಣಿಕೆಗಾಗಿ ಅರ್ಜಿ ಸಲ್ಲಿಸಲು ೨೯-೧೨-೮೮ರಂದು ಕೊನೆಯ ದಿನಾಂಕವಾಗಿದ್ದು ಮರು ಎಣಿಕೆಕಾರ್ಯ ಪ್ರಗತಿಯಲ್ಲಿದೆ ಹಾಗೂ ಅಭ್ಯರ್ಥಿಗಳಿಗೆ ತ್ವರಿತವಾಗಿ ಮರು ಎಣಿಕೆ ಫಲಿತಾಂಶವನ್ನು ತಿಳಿಸಲಾಗುವುದು.

ಉ) (ಈ) ಪ್ರಶ್ನೆಯ ಉತ್ತರದಿಂದಾಗಿ ಇದು ಉಬ್ಬವಿಸುವುದಿಲ್ಲ.

ಆರೋಗ್ಯ ಇಲಾಖೆಯು ೧.೨ ಲಕ್ಷ ಕುಷ್ಟ ರೋಗಿಗಳನ್ನು ಗುರುತಿಸುವ ಬಗ್ಗೆ

೪೦೨ (೫೧೯) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಇತ್ತೀಚೆಗೆ ಸಮಾಜಕಲ್ಯಾಣ ಸಚಿವರು ರಾಜ್ಯದಲ್ಲಿ ಆರೋಗ್ಯ ಇಲಾಖೆಯು ೧.೨ ಲಕ್ಷ ಕುಷ್ಠರೋಗಿಗಳನ್ನು ಚಿಕಿತ್ಸೆಗಾಗಿ ಗುರುತಿಸಿರುವುದು ನಿಜವಲ್ಲವೇ, (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡಬೇಕಾಗಿ ವಿನಂತಿ)

ಆ) ಹಾಗಿದ್ದಲ್ಲಿ ರಾಜ್ಯದಲ್ಲಿನ ಪ್ರತಿಯೊಂದು ಆಸ್ಪತ್ರೆಯಲ್ಲೂ ಕುಷ್ಠರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆಯೇ ?

ಇ) ಹಾಗಲ್ಲದಿದ್ದಲ್ಲಿ ಪ್ರತಿಯೊಂದು ಆಸ್ಪತ್ರೆಯಲ್ಲೂ ಕುಷ್ಠರೋಗ ಚಿಕಿತ್ಸೆಯನ್ನು ಪ್ರಾರಂಭಿಸಲಾಗುವುದೇ ?